ಕಟ್ಟುಮಸ್ತು ಪೈಲ್ವಾನರ ಜೋಡಿ ಕಟ್ಟುವ ಕಾರ್ಯ

೫೦೦ಕ್ಕೂ ಹೆಚ್ಚು ಪೈಲ್ವಾನರ ನೋಂದಣಿ; ಸೆ.೨೧ರ ದಸರಾ ಕುಸ್ತಿ... ಕಣ್ತುಂಬಿಕೊಳ್ಳಲು ಜನ ಕಾತರ

ಮೈಸೂರು,ಸೆ.೧೨– ನಾಡಕುಸ್ತಿ ಜೋಡಿ ಕಟ್ಟುವ ಕಾರ್ಯದಲ್ಲಿ ಐನೂರಕ್ಕೂ ಹೆಚ್ಚು ಪೈಲ್ವಾನರು ನೋಂದಾಯಿಸಿಕೊಂಡಿದ್ದು, ಮಟ್ಟಿಯಲ್ಲಿ ಬಲಾಬಲ ಪ್ರದರ್ಶಿಸಲು ಸಿದ್ಧರಾಗಿದ್ದಾರೆ.

ಮೈಸೂರು ದಸರಾ ಮಹೋತ್ಸವ ಕುಸ್ತಿ ಉಪ ಸಮಿತಿ ವತಿಯಿಂದ ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಆವರಣದ ಪಿ.ಕಾಳಿಂಗ ರಾವ್ ಸಭಾಂಗಣದಲ್ಲಿ ಮಂಗಳವಾರ ಜೋಡಿ ಕಟ್ಟುವ ಕಾರ್ಯ ನಡೆಯಿತು.

ಮಂಡ್ಯ, ಬೆಂಗಳೂರು, ಚಾಮರಾಜನಗರ, ನಂಜನಗೂಡು, ಮೈಸೂರು ಮುಂತಾದ ಸ್ಥಳಗಳಿಂದ ೫೦೦ಕ್ಕೂ ಹೆಚ್ಚು ಪೈಲ್ವಾನರು ಭಾಗವಹಿಸಿದ್ದರು. ಇವರಲ್ಲಿ ೨೦೦ಕ್ಕೂ ಹೆಚ್ಚು ಜೋಡಿಗಳನ್ನು ನಿಗದಿ ಮಾಡಲಾಗಿದ್ದು, ಸೆ.೨೧ರಿಂದ ೬ ದಿನಗಳವರೆಗೆ ಪ್ರತಿ ದಿನ ೩೦ರಿಂದ ೩೫ ಜೋಡಿಗಳು ತೊಡೆ ತಟ್ಟಲಿದ್ದಾರೆ.

ಪಿ.ಕಾಳಿಂಗರಾವ್ ಸಭಾಂಗಣದಲ್ಲಿನ ನಾಡಕುಸ್ತಿ ಕಟ್ಟುವ ಕಾರ್ಯಕ್ಕೆ ಹೆಚ್ಚಿನ ಯುವ ಪೈಲ್ವಾನರು ಆಗಮಿಸಿದ್ದರಿಂದ ಕುಸ್ತಿ ಉಪ ಸಮಿತಿಯವರು ಹೈರಾಣಾದರು. ಪೈಲ್ವಾನರು ನೋಂದಾಯಿಸಲು ಮುಗಿಬಿದಿದ್ದರಿಂದ ಗದ್ದಲ ವುಂಟಾಯಿತು. ಬೆಳಿಗ್ಗೆ ಆರಂಭವಾದ ಜೋಡಿ ಕಟ್ಟುವ ಕಾರ್ಯವೂ ಸಂಜೆಯವರೆಗೂ ನಡೆಯಿತು.

ದಸರಾ ಕುಸ್ತಿ ಉಪ ಸಮಿತಿ ಕಾರ್ಯಾಧ್ಯಕ್ಷರಾದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರವಿ ಡಿ.ಚನ್ನಣ್ಣನವರ್ ಜೋಡಿ ಕಟ್ಟುವ ಕಾರ್ಯಕ್ಕೆ ಚಾಲನೆ ನೀಡಿ ಮಾತನಾಡಿ, ಪೈಲ್ವಾನರು ಬಲಹೀನರಿಗೆ ರಕ್ಷಣೆಯಾಗಿರಬೇಕು. ಕಾನೂನು ಬಾಹಿರವಾದ ಚಟುವಟಿಕೆಗಳಲ್ಲಿ ಭಾಗವಹಿಸಬಾರದು ಎಂದು ತಿಳಿ ಹೇಳಿದರು.

ಹಿಂದೆ ಹೆಚ್ಚಿನ ಸಂಖ್ಯೆಯಲ್ಲಿ ಯುವಕರು ಗರಡಿಗಳಲ್ಲಿ ತೊಡಗಿಸಿಕೊಳ್ಳುತ್ತಿದ್ದರು. ಆದರೆ, ಇಂದು ಗರಡಿಯಲ್ಲಿ ತೊಡಗಿಸಿಕೊಳ್ಳುವವರ ಸಂಖ್ಯೆ ಕ್ಷೀಣಿಸುತ್ತಿದೆ. ಆದ್ದರಿಂದ ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಈ ಕಲೆಯನ್ನು ಉಳಿಸಬೇಕು. ಪೈಲ್ವಾನರು ದಸರಾ ಕುಸ್ತಿಗೆ ಸೀಮಿತವಾಗದೇ ರಾಷ್ಟ್ರೀಯ–ಅಂತಾರಾಷ್ಟ್ರೀಯ ಮಟ್ಟದ ಸ್ಪರ್ಧೆಗಳಲ್ಲಿ ಪಾಲ್ಗೊಂಡು ಮೈಸೂರಿಗೆ ಕೀರ್ತಿ ತರಬೇಕು ಎಂದು ತಿಳಿಸಿದರು.

ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಬಿ.ಸಿದ್ದರಾಜು, ಕರ್ನಾಟಕ ರಾಜ್ಯ ಕುಸ್ತಿ ಸಂಸ್ಥೆ ಕಾರ್ಯಾಧ್ಯಕ್ಷ ಪ್ರೊ.ಕೆ.ರಂಗಯ್ಯ, ಕುಸ್ತಿ ಉಪ ಸಮಿತಿ ಕಾರ್ಯದರ್ಶಿ ಡಿ.ರವಿಕುಮಾರ್, ಹಿರಿಯ ಪೈಲ್ವಾನರಾದ ಅಮೃತ್ ಪುರೋಹಿತ್, ಚೋಟಾ ರಫೀಕ್, ಗಂಜಾಂ ಮಲ್ಲು ಸ್ವಾಮಿ, ನಂಜನಗೂಡು ಸಿದ್ದರಾಜು, ಬನ್ನೂರು ರವಿ, ಟೈಗರ್ ಬಾಲಾಜಿ, ಬೋಗಾದಿ ಗಣೇಶ್ ಮುಂತಾದವರು ಈ ಸಂದರ್ಭದಲ್ಲಿ ಹಾಜರಿದ್ದರು.

ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಆವರಣದ ಪಿ.ಕಾಳಿಂಗ ರಾವ್ ಸಭಾಂಗಣದಲ್ಲಿ ಮಂಗಳವಾರ ಜೋಡಿ ಕಟ್ಟುವ ಕಾರ್ಯಕ್ರಮದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರವಿ ಡಿ.ಚನ್ನಣ್ಣನವರ್ ಅವರು ಮಾತನಾಡುತ್ತಿರುವುದು.

ಕುಸ್ತಿಪ್ರಿಯರಿಗೆ ಸ್ಪರ್ಧೆಗಳ ರಸದೌತಣ

ಮೈಸೂರು: ಉಸಿರು ಬಿಗಿ ಹಿಡಿದು ಒಂದೇ ಸಮನೇ ಬಸ್ಕಿ ಒಡೆದ ಪೈಲ್ವಾನರು, ಎರಡು ಕೈಗಳಿಂದ ಗದ್ದೆ ತಿರುಗಿಸಿ ಬಲಾಬಲ ಪ್ರದರ್ಶಿಸುತ್ತಿದ್ದ ಜಟ್ಟಿಗಳಿಗೆ ಕುಸ್ತಿ ಪ್ರಿಯರಿಂದ ಪ್ರೋತ್ಸಾಹವೋ ಪ್ರೋತ್ಸಾಹ.

ಕುಸ್ತಿಪಟುಗಳು ಹೆಚ್ಚಿನ ವ್ಯಾಯಾಮದಲ್ಲಿ ತೊಡಗಿ ತಮ್ಮ ದೇಹ ಅಭಿವೃದ್ಧಿ ಪಡಿಸಿಕೊಳ್ಳಲು ಪ್ರೋತ್ಸಾಹಿಸುವ ಉದ್ದೇಶದಿಂದ ಇದೇ ಮೊದಲ ಬಾರಿಗೆ ದಸರಾ ಕುಸ್ತಿ ಉಪ ಸಮಿತಿ ವತಿಯಿಂದ ಹಲವಾರು ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ನೂರಾರು ಪೈಲ್ವಾನರು ಪಾಲ್ಗೊಂಡು ಗಮನಸೆಳೆದರು.

ಬಸ್ಕಿ ಸ್ಪರ್ಧೆಯಲ್ಲಿ ೩ ಪೈಲ್ವಾನರು ೫೯ ಬಸ್ಕಿಗಳನ್ನು ಒಡೆದರು. ಬಳಿಕ ತೀರ್ಪುಗಾರರು ಲಾಟರಿ ಮೂಲಕ ಆಯ್ಕೆ ಮಾಡಿ ವಿಜೇತರನ್ನು ಘೋಷಿಸಿದರು. ಇವರಲ್ಲಿ ಗಂಜಾಂ ನಾರಾಯಣ (ಪ್ರ), ಮೈಸೂರಿನ ರವಿ ನಾಗರಾಜು (ದ್ವಿ), ಉಲ್ಲಾಸ್ (ತೃ) ಸ್ಥಾನಗಳಿಗೆ ಪಾತ್ರರಾದರು.

ಗದೆ ತಿರುಗಿಸುವ ಸ್ಪರ್ಧೆಯಲ್ಲಿ ನಂಜನಗೂಡು ತಾ. ಕಳಲೆ ಲಂಬೋಧರ (ಪ್ರ), ಮೈಸೂರಿನ ಶಬೀರ್‌ಖಾನ್ (ದ್ವಿ), ವೀರನಗೆರೆ ವಿಕಾಸ್ (ತೃ) ಮತ್ತು ಗರ್ದನಕಲ್ಲು ಭುಜದ ಮೇಲೆ ಇಟ್ಟುಕೊಂಡು ಬೈಸಿಗೆ ಒಡೆಯುವ ಸ್ಪರ್ಧೆಯಲ್ಲಿ ನಂಜನಗೂಡಿನ ಲಂಬೋಧರ (ಪ್ರ), ಗಂಜಾಂನ ನಾರಾಯಣ (ದ್ವಿ) ಮತ್ತು ಮಂಜು (ತೃ) ಸ್ಥಾನಗಳನ್ನು ಪಡೆದರು.

೫೩ ಬಸ್ಕಿ ಹೊಡೆದ ವಿಶೇಷಚೇತನ ಪೈಲ್ವಾನ್

ಮೈಸೂರು: ಪಿ.ಕಾಳಿಂಗ ರಾವ್ ಸಭಾಂಗಣದಲ್ಲಿ ನಡೆದ ಬಸ್ಕಿ ಹೊಡೆ ಯುವ ಸ್ಪರ್ಧೆಯಲ್ಲಿ ವಿದ್ಯಾರಣ್ಯಪುರಂನ ಗೋಪಾಲಸ್ವಾಮಿ ಗರಡಿಯ ತರಬೇತುದಾರ ಚಿಕ್ಕ ರಂಗಣ್ಣ ಅವರ ನೇತೃತ್ವದಲ್ಲಿ ವಿಶೇಷಚೇತನ ಮಹೇಶ್ ಆರಾಧ್ಯ ಅವರು ೫೩ ಬಸ್ಕಿಗಳನ್ನು ಹೊಡೆದು ಎಲ್ಲರೂ ಹುಬ್ಬೇರುವಂತೆ ಮಾಡಿದರು; ಅಂಗವಿಕಲತೆ ನ್ಯೂನತೆಯಲ್ಲ ಎಂಬುದನ್ನು ಸಾಬೀತುಪಡಿಸಿದರು.

ಮೈಸೂರಿನ ಭಾರತ್ ಕ್ಯಾನ್ಸರ್ ಆಸ್ಪತ್ರೆಯಲ್ಲಿ ಕ್ಯಾನ್ಸರ್ ಕಾಯಿಲೆ ಗೆ ಚಿಕಿತ್ಸೆ ಪಡೆಯುತ್ತಿರುವ ತಿ. ನರಸೀಪುರ ತಾಲ್ಲೂಕಿನ ಕೇತಹಳ್ಳಿ ಗ್ರಾಮದ ಸಿದ್ದೂರು ಶೆಟ್ಟಿ ಚಿಕಿತ್ಸೆಗೆ ಪ್ರಧಾನಮಂತ್ರಿ ಪರಿಹಾರ ನಿಧಿಯಿಂದ ಸಂಸದ ಪ್ರತಾಪಸಿಂಹ ೧,೧೬,೬೨೫ ರೂ.ಗಳ ನೆರವು ವಿತರಿಸುತ್ತಿರುವುದನ್ನು ಚಿತ್ರದಲ್ಲಿ ಕಾಣಬಹುದು.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಮೈಸೂರು,ಸೆ.೧೨–ಆದರ್ಶ ಸೇವಾ ಸಂಘದ ವತಿಯಿಂದ ತ್ರಿಮತಸ್ಥ ಬ್ರಾಹ್ಮಣ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ.

೨೦೧೭ರಲ್ಲಿ ನಡೆದ ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಗಳಲ್ಲಿ ನಗರ ಪ್ರದೇಶಗಳಲ್ಲಿ ಓದಿದ ವಿದ್ಯಾರ್ಥಿಗಳು ಶೇ.೯೦ಕ್ಕಿಂತ ಹೆಚ್ಚು ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಓದಿದ ವಿದ್ಯಾರ್ಥಿಗಳು ಶೇ.೮೫ ಅಂಕ ಗಳಿಸಿದ್ದಲ್ಲಿ ಅರ್ಜಿ ಸಲ್ಲಿಸಬಹುದು. ಆಸಕ್ತ ಬ್ರಾಹ್ಮಣ ವಿದ್ಯಾರ್ಥಿಗಳು ಸಂಘದ ಕಚೇರಿಯಿಂದ ಅರ್ಜಿ ಪಡೆದು ಸೆ. ೩೦ರೊಳಗೆ ಸಲ್ಲಿಸಬೇಕು. ವಿವರಗಳಿಗೆ ಮೊ.ಸಂ.: ೯೪೮೦೧೬೬೨೭೪, ೭೮೪೮೦ ೭೬೩೮೬ ಸಂಪರ್ಕಿಸಬಹುದು.

ಮೈಸೂರು ವಿವಿಗೆ ಖಾಯಂ ಕುಲಪತಿ ನೇಮಕಕ್ಕೆ ಒತ್ತಾಯ

ಮೈಸೂರು,ಸೆ.೧೨– ಮೈಸೂರು ವಿಶ್ವವಿದ್ಯಾನಿಲಯಕ್ಕೆ ಶೀಘ್ರವಾಗಿ ಖಾಯಂ ಕುಲಪತಿಯನ್ನು ನೇಮಕ ಮಾಡಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಬೇಕಾಗುತ್ತದೆ ಎಂದು ಮೈಸೂರು ನಗರ (ಜಿಲ್ಲಾ) ಜಾ.ದಳ ಕಾನೂನು ವಿಭಾಗದ ಅಧ್ಯಕ್ಷ, ವಕೀಲ ಎನ್.ಆರ್.ರವಿಚಂದ್ರೇಗೌಡ ಎಚ್ಚರಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು ವಿವಿಯಲ್ಲಿ ಕುಲಪತಿ ನಿವೃತ್ತರಾಗಿ ಏಳೆಂಟು ತಿಂಗಳು ಕಳೆದರೂ ಖಾಯಂ ಕುಲಪತಿಯನ್ನು ನೇಮಿಸಿಲ್ಲ. ಇದರಿಂದ ವಿದ್ಯಾರ್ಥಿಗಳು ತೊಂದರೆಗೆ ಸಿಲುಕಿದ್ದಾರೆ. ಪರೀಕ್ಷೆಗಳು ಸಮೀಪಿಸುತ್ತಿವೆ, ಹೊಸ ಕೋರ್ಸು ಆರಂಭಿಸಲು, ಉಪನ್ಯಾಸಕರನ್ನು ನೇಮಿಸಲು, ಯಾವುದೇ ಅಭಿವೃದ್ಧಿ ಕೆಲಸ ಕೈಗೆತ್ತಿಕೊಳ್ಳಲು ಆಡಳಿತಾತ್ಮಕ ನಿರ್ಧಾರ ಕೈಗೊಳ್ಳಲು, ಪದವಿ ಪ್ರಮಾಣ ಪತ್ರಗಳಿಗೆ ಸಹಿ ಹಾಕಲು ಖಾಯಂ ಕುಲಪತಿ ಅಗತ್ಯ. ಆದ್ದರಿಂದ ಮುಖ್ಯ ಮಂತ್ರಿಗಳು ಮತ್ತು ರಾಜ್ಯಪಾಲರು ವಿವಿಗೆ ಖಾಯಂ ಕುಲಪತಿ ನೇಮಕ ಮಾಡಬೇಕು ಎಂದು ಒತ್ತಾಯಿಸಿದರು.

ಜಾ.ದಳ ಮುಖಂಡರಾದ ಪಿ.ಮಂಜುನಾಥ್, ರಾಜಶೇಖರ್, ಆರ್.ಮುದ್ದುರಾಜ್, ಎಸ್.ಜಯಪ್ರಕಾಶ್, ಸೋಮಶೇಖರ್ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಚುನಾವಣೆಗೆ ಜಾ.ದಳ ಸಜ್ಜು: ಎಚ್‌ಡಿಡಿ

ಬೆಂಗಳೂರು,ಸೆ.೧೨– ಮುಂದಿನ ವಿಧಾನಸಭೆ ಚುನಾವಣೆಗೆ ಜಾ.ದಳ ಈಗಾಗಲೇ ಸಜ್ಜುಗೊಂಡಿದ್ದು, ಪ್ರತಿ ವಾರ್ಡ್, ಹೋಬಳಿ ಮಟ್ಟದಿಂದಲೇ ಪಕ್ಷ ಬಲವರ್ಧನೆಗೊಳಿಸಲು ಹತ್ತು ಹಲವು ಕಾರ್ಯಕ್ರಮಗಳನ್ನು ರೂಪಿಸಿಕೊಂಡಿದೆ ಎಂದು ಜಾ.ದಳ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ.ದೇವೇಗೌಡ ಹೇಳಿದ್ದಾರೆ.

ನಗರದ ಖಾಸಗಿ ಹೋಟೆಲ್‌ನಲ್ಲಿ ನೂತನವಾಗಿ ಆಯ್ಕೆಯಾಗಿರುವ ರಾಜ್ಯ ಮಟ್ಟದ ಪದಾಧಿಕಾರಿಗಳ ಸಭೆಯನ್ನುದ್ದೇಶಿಸಿ ಮಾತನಾಡಿದ ಅವರು, ಪ್ರತಿ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬೂತ್‌ಮಟ್ಟದ ಕಮಿಟಿ ರಚಿಸಲಾಗಿದೆ. ಅದೇ ರೀತಿ ಹೋಬಳಿ ಮಟ್ಟದಲ್ಲೂ ರಚನೆ ಮಾಡಲಾಗಿದ್ದು, ಕಾರ್ಯಕರ್ತರು ಪಕ್ಷದ ಬಲವರ್ಧನೆಗೆ ಮುಂದಾಗಬೇಕೆಂದು ಕರೆ ನೀಡಿದರು.



ಪ್ರತಿ ಕ್ಷೇತ್ರದಲ್ಲೂ ವೀಕ್ಷಕರನ್ನು ನೇಮಕ ಮಾಡಲಾಗಿದೆ. ಇದನ್ನು ಆ ಭಾಗಕ್ಕೆ ಸಂಬಂಧಿಸಿದ ಜಾ.ದಳ ಮುಖಂಡರು ನೇತೃತ್ವದ ವಹಿಸಲಿದ್ದು, ೧೫ ದಿನಗಳಿಗೊಮ್ಮೆ ಪ್ರಗತಿ ಪರಿಶೀಲನೆ ಬಗ್ಗೆ ಮಾಹಿತಿ ನೀಡಬೇಕೆಂದು ಹೇಳಿದರು. ರಾಜ್ಯದ ಮೂವತ್ತು ಜಿಲ್ಲೆಗಳಲ್ಲೂ ಅಭ್ಯರ್ಥಿಗಳು ಚುನಾವಣೆಯಲ್ಲಿ ಸ್ಪರ್ಧಿಸಲಿದ್ದು, ಪರಿಗಣಿಸಿ ಅಭ್ಯರ್ಥಿಗಳನ್ನಾಗಿ ಆಯ್ಕೆ ಮಾಡಲಾಗುವುದು. ಎಲ್ಲಾ ಕಾರ್ಯಕರ್ತರನ್ನು ಪರಿಗಣನೆಗೆ ತೆಗೆದುಕೊಂಡು ಸಂಘಟನೆಯೊಂದಿಗೆ ಮುನ್ನಡೆಯುತ್ತೇವೆ ಎಂದರು.

ಮುಂದಿನ ದಿನದಲ್ಲಿ ವಿಶ್ರಾಂತಿ ಇಲ್ಲದೆ ಪಕ್ಷದ ಸಂಘಟನೆಗೆ ಒತ್ತು ನೀಡುತ್ತೇವೆ. ಈ ನಿಟ್ಟಿನಲ್ಲಿ ಪ್ರವಾಸ ಸೇರಿದಂತೆ ಎಲ್ಲಾ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತೇವೆ ಎಂದು ದೇವೇಗೌಡರು ತಿಳಿಸಿದರು.

ಚಿತ್ರಗೀತೆಗಳ ಸ್ಪರ್ಧೆ

ಮೈಸೂರು,ಸೆ.೧೨–ಏಕತಾ ಮೈಸೂರು ಸಾಂಸ್ಕೃತಿಕ ವೇದಿಕೆ ವತಿಯಿಂದ ಸೆ. ೧೮ರಂದು ಮಧ್ಯಾಹ್ನ ೩ ಗಂಟೆಗೆ ರಾಮಕೃಷ್ಣ ನಗರದ ನೃಪತುಂಗ ಕನ್ನಡ ಶಾಲೆಯಲ್ಲಿ ಸಾಹಸಸಿಂಹ ಡಾ.ವಿಷ್ಣುವರ್ಧನ್ ಹುಟ್ಟುಹಬ್ಬದ ಪ್ರಯುಕ್ತ ಚಿತ್ರಗೀತೆಗಳ ಸ್ಪರ್ಧೆ ಆಯೋಜಿಸಲಾಗಿದೆ. ೩ ವರ್ಷದಿಂದ ೧೫ ವರ್ಷದವರೆಗೆ ಮತ್ತು ೧೫ ವರ್ಷ ಮೇಲ್ಪಟ್ಟ ಮಕ್ಕಳಿಗೆ ಸ್ಪರ್ಧೆ ನಡೆಯಲಿದೆ. ವಿವರಗಳಿಗೆ ಮೊ.ಸಂ.: ೯೮೮೬೩೬೧೩೪೩, ೮೮೯೨೫೯೧೨೪೬ ಸಂಪರ್ಕಿಸಬಹುದು.

ಕನ್ನೇಗೌಡ ಕ್ರಿಕೆಟ್ ಮೈದಾನದಲ್ಲಿ ವಿಶೇಷಚೇತನರ ಕ್ರಿಕೆಟ್ ಪಂದ್ಯಾವಳಿ

ಕೃಷ್ಣರಾಜ ಒಡೆಯರ್ ತಂಡಕ್ಕೆ ಜಯ

ಮೈಸೂರು,ಸೆ.೧೨– ವಿಶೇಷ ಚೇತನರ ಕ್ರಿಕೆಟ್ ಪಂದ್ಯಾವಳಿಯಲ್ಲಿ ಕೃಷ್ಣರಾಜ ಒಡೆಯರ್ ತಂಡ ವಿಜಯಿಯಾಯಿತು.

ಸಹನಾ ಚಾರಿಟಬಲ್ ಟ್ರಸ್ಟ್ ಸಹಯೋಗದೊಂದಿಗೆ ಮೈಸೂರು ಅಮಿಟಿ ರೌಂಡ್ ಟೇಬಲ್ ೧೫೬ (ಮಾರ್ಟ್–೧೫೬) ವತಿಯಿಂದ ಕನ್ನೇಗೌಡ ಕ್ರಿಕೆಟ್ ಮೈದಾನದಲ್ಲಿ ನಡೆದ ವಿಶೇಷ ಕ್ರಿಕೆಟ್ ಪಂದ್ಯಾವಳಿಯಲ್ಲಿ ನರಸಿಂಹರಾಜ ಒಡೆಯರ್ ತಂಡವನ್ನು ಮಣಿಸಿ ವಿಜಯದ ನಗೆ ಬೀರಿತು.

ಎನ್‌ಆರ್ ಸಮೂಹದ ಸೈಕಲ್ ಪ್ಯೂರ್ ಅಗರಬತ್ತೀಸ್ ಒಡೆತನದ ಕ್ರಿಕೆಟ್ ಫ್ರಾಂಚೈಸಿ ಆಗಿರುವ ಮೈಸೂರು ವಾರಿಯರ್ಸ್ ತಂಡ ಪಂದ್ಯಾವಳಿಗೆ ಚಾಲನೆ ನೀಡಿತು.

ಇದೇ ವೇಳೆ, ದೃಷ್ಟಿ ವಿಶೇಷಚೇತನ ಕ್ರೀಡಾಪಟು ಜೆ.ಎಂ.ಶವಾದ್ ಅವರ ಸಾಧನೆಯನ್ನು ಗುರುತಿಸಿ ಸನ್ಮಾನ ಮಾಡಲಾಯಿತು. ಆಶಾಕಿರಣ ಅಂಧಮಕ್ಕಳ ಶಾಲೆಯ ವಿದ್ಯಾರ್ಥಿ ಶವಾದ್ ಪ್ರತಿಭಾವಂತ ಕ್ರೀಡಾಪಟುವಾಗಿದ್ದು, ದೃಷ್ಟಿಚೇತನರಿಗಾಗಿ ಆಯೋಜಿಸಲಾದ ಹಲವಾರು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಪಂದ್ಯಾವಳಿಗಳಲ್ಲಿ ಪಾಲ್ಗೊಂಡಿದ್ದಾರೆ.

ಅನೇಕ ಕ್ರೀಡಾಕೂಟಗಳಲ್ಲಿ ಚಿನ್ನ ಮತ್ತು ಕಂಚಿನ ಪದಕಗಳನ್ನು ಗಳಿಸುವ ಮೂಲಕ ಚಿನ್ನದ ಹುಡುಗ ಎನ್ನುವ ಖ್ಯಾತಿ ಪಡೆದಿದ್ದಾರೆ.

ಪಂದ್ಯಾವಳಿಯಲ್ಲಿ ಕರ್ನಾಟಕದ ಎಲ್ಲ ಭಾಗಗಳಿಂದ ೪೫ಕ್ಕಿಂತಲೂ ಹೆಚ್ಚು ದೃಷ್ಟಿ ವಿಶೇಷಚೇತನರು ಭಾಗವಹಿಸುವ ಮೂಲಕ ಪಂದ್ಯಾವಳಿಯನ್ನು ಯಶಸ್ವಿಗೊಳಿಸಿದರು.

ಪಂದ್ಯಾವಳಿ ಬಗ್ಗೆ ಮಾತನಾಡಿದ ಮಾರ್ಟ್–೧೫೬ರ ಅಧ್ಯಕ್ಷ ಅನಿರುದ್ಧ ರಂಗ, ವಿಶೇಷಚೇತನರಿಗಾಗಿ ಆಯೋಜಿಸಲಾಗುವ ಇಂತಹ ಕ್ರಿಕೆಟ್ ಪಂದ್ಯಾವಳಿಗಳು ತಂಡದ ಬಲವನ್ನು ವೃದ್ಧಿಸುವ ಮತ್ತು ಕ್ರೀಡಾಪಟುವನ್ನು ಉತ್ತೇಜಿಸುವ ಜೊತೆಗೆ ಕ್ರೀಡಾಪಟುಗಳ ದೈಹಿಕ ಆರೋಗ್ಯವನ್ನು ಸಹ ಸುಧಾರಿಸುತ್ತವೆ. ಹಾಗಾಗಿ ಸಮಗ್ರ ಬೆಳವಣಿಗೆಯನ್ನು ಕೇಂದ್ರೀಕರಿಸುವ ಇಂತಹ ಚಟುವಟಿಕೆಗಳನ್ನು ಆಯೋಜಿಸುವುದು ನಮಗೆ ಮಹತ್ವವಾಗಿ ಕಾಣುತ್ತದೆ ಎಂದು ಹೇಳಿದರು.

ಮೈಸೂರಿನ ಕನ್ನೇಗೌಡ ಮೈದಾನದಲ್ಲಿ ನಡೆದ ವಿಶೇಷಚೇತನರ ಕ್ರಿಕೆಟ್ ಪಂದ್ಯಾವಳಿಯಲ್ಲಿ ವಿಶೇಷಚೇತನ ಕ್ರೀಡಾಪಟು ಜೆ.ಎಂ.ಶವಾದ್ ಅವರನ್ನು ಸನ್ಮಾನಿಸಲಾಯಿತು.

ದಸರಾ ಕ್ರೀಡಾಕೂಟಕ್ಕೆ ರಾಜೇಶ್ವರಿ ಗಾಯಕ್ವಾಡ್‌ಗೆ ಆಹ್ವಾನ

ಮೈಸೂರು,ಸೆ.೧೨–ದಸರಾ ಮಹೋತ್ಸವದ ಕ್ರೀಡಾ ಉಪಸಮಿತಿ ಮಂಗಳವಾರ ಬೆಂಗಳೂರಿನಲ್ಲಿ ಭಾರತ ಮಹಿಳಾ ಕ್ರಿಕೆಟ್ ತಂಡದ ಆಟಗಾರ್ತಿ ರಾಜೇಶ್ವರಿ ಗಾಯಕ್ವಾಡ್ ಅವರನ್ನು ಅಧಿಕೃತವಾಗಿ ಆಹ್ವಾನಿಸಿತು.

ಉಪಸಮಿತಿಯ ಕಾರ್ಯದರ್ಶಿಗಳು ಮತ್ತು ಸೆಸ್ಕ್ ಮುಖ್ಯ ಪ್ರಬಂಧಕ ಸತೀಶ್ ಮತ್ತು ಜಿಲ್ಲಾ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಕೆ.ಸುರೇಶ್ ಅವರು ಸಾಂಪ್ರದಾಯಿಕವಾಗಿ ಮೈಸೂರು ಪೇಟ ತೊಡಿಸಿ, ಶಾಲು ಹೊದಿಸಿ ಫಲತಾಂಬೂಲಗಳೊಡನೆ ಅಭಿನಂದಿಸಿದರು.

ಕ್ರೀಡಾ ಉಪಸಮಿತಿ ಅಧಿಕಾರಿಗಳು ಇದೇ ಸಂದರ್ಭದಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಚಿವ ಪ್ರಮೋದ್ ಮಧ್ವರಾಜ್ ಅವರಿಗೂ ಆತ್ಮೀಯವಾಗಿ ಸೆ.೨೧ರಂದು ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ನಡೆಯಲಿರುವ ಕ್ರೀಡಾ ದಸರಾ ಉದ್ಘಾಟನೆಗೆ ಆಮಂತ್ರಣ ನೀಡಿದರು.

ಕನ್ನಡಪರ ಸಂಘಟನೆಗಳ ಮನವಿ

ರಾಷ್ಟ್ರೀಯ ಹಬ್ಬ, ಉತ್ಸವ ಹಾಗೂ ದಸರಾ ಕಾರ್ಯಕ್ರಮಗಳಲ್ಲಿ ಕೆಲವೇ ಸಂಘಟನೆಗಳಿಗೆ ಮಣೆ ಹಾಕಿ ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಅಧಿಕಾರಿಗಳು ತುಘಲಕ್ ದರ್ಬಾರ್ ನಡೆಸುತ್ತಿದ್ದಾರೆ ಎಂದು ಆರೋಪಿಸಿ, ಎಲ್ಲ ಸಂಘಟನೆಗಳನ್ನೂ ಸರಿಸಮನಾಗಿ ಪರಿಗಣಿಸಬೇಕೆಂದು ಒತ್ತಾಯಿಸಿ ಮೈಸೂರು ನಗರ ಮತ್ತು ಜಿಲ್ಲಾ ಕನ್ನಡ ಸಂಘ-ಸಂಸ್ಥೆಗಳ ಒಕ್ಕೂಟದಿಂದ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ. ಮಹದೇವಪ್ಪ ಅವರಿಗೆ ಮನವಿ ಸಲ್ಲಿಸಲಾಯಿತು. ಈ ವೇಳೆ ವಿವಿಧ ಸಂಘಟನೆಗಳ ಮುಖಂಡರಾದ ಬಿ.ವಿ.ಶಿವಶಂಕರ್, ಅರವಿಂದ್ ಶರ್ಮ, ಮಹದೇವಸ್ವಾಮಿ, ಜಿ.ಬಸವಣ್ಣ, ಪುರುಷೋತ್ತಮ್, ಎಸ್.ನಟರಾಜು, ಎಂ.ಪಿ.ಜಗದೀಶ ಇತರರು ಹಾಜರಿದ್ದರು.

ರಾಷ್ಟ್ರೀಯ ಪೌಷ್ಠಿಕಾಂಶ ಸಪ್ತಾಹ

ಮೈಸೂರಿನ ವಿಶ್ವಪ್ರಜ್ಞ ಸಂಯುಕ್ತ ಪದವಿ ಪೂರ್ವ ಕಾಲೇಜು, ಭಾರತ ಪೌಷ್ಟಿಕಾಂಶ ಸಂಘ, ಯುವರಾಜ ಕಾಲೇಜಿನ ಆಹಾರ ವಿಜ್ಞಾನ ಹಾಗೂ ಪೌಷ್ಟಿಕಾಂಶ ವಿಭಾಗದ ಜಂಟಿ ಸಹಯೋಗದಲ್ಲಿ ಯವರಾಜ ಕಾಲೇಜಿನಲ್ಲಿ ರಾಷ್ಟ್ರೀಯ ಪೌಷ್ಟಿಕಾಂಶ ಸಪ್ತಾಹವನ್ನು ಉದ್ಘಾಟಿಸಲಾಯಿತು. ಡಿಎಚ್‌ಒ ಬಿ.ಬಸವರಾಜು, ವಿಶ್ವಪ್ರಜ್ಞ ಕಾಲೇಜಿನ ವ್ಯವಸ್ಥಾಪಕ ಟ್ರಸ್ಟಿ ಎಸ್.ವಿಶ್ವನಾಥ್, ಪಿ.ಎಸ್.ಪ್ರಸಾದ್, ಡಾ.ವೆಂಕಟೇಶ್ ಮತ್ತು ಡಾ.ಶೇಖರ್ ನಾಯಕ್ ಚಿತ್ರದಲ್ಲಿದ್ದಾರೆ.

ಬನುಮಯ್ಯದಲ್ಲಿ ಸಾಂಸ್ಕೃತಿಕ ವೇದಿಕೆ ಆರಂಭ

ಮೈಸೂರಿನ ನ್ಯೂ ಸಯ್ಯಾಜಿರಾವ್ ರಸ್ತೆಯಲ್ಲಿರುವ ಡಿ.ಬನುಮಯ್ಯ ಸ್ವತಂತ್ರ ಪದವಿ ಪೂರ್ವ ಕಾಲೇಜಿನಲ್ಲಿ ೨೦೧೭-೧೮ನೇ ಸಾಲಿನ ಸಾಂಸ್ಕೃತಿಕ ವೇದಿಕೆಯನ್ನು ಬೋಧಿವೃಕ್ಷಕ್ಕೆ ನೀರೆರೆಯುವ ಮೂಲಕ ಉದ್ಘಾಟಿಸಲಾಯಿತು. ಸಂಸ್ಥೆ ಅಧ್ಯಕ್ಷ ಡಾ.ವಿ.ಬಿ.ಜಯದೇವ, ಕಾರ್ಯದರ್ಶಿ ಎಸ್.ಜೆ.ಲಕ್ಷ್ಮೀಗೌಡ, ಆಡಳಿತಾಧಿಕಾರಿ ಡಾ.ಎನ್.ತಿಮ್ಮಯ್ಯ, ಪಿಯು ಡಿಡಿ ವಿ.ಆರ್.ಶಾಮಲಾ, ಪ್ರಾಂಶುಪಾಲ ಎಂ.ಚಂದ್ರಶೇಖರ್, ಸಾಂಸ್ಕೃತಿಕ ವೇದಿಕೆ ಸಂಚಾಲಕ ಡಾ.ಎಂ.ಕೃಷ್ಣಮೂರ್ತಿ, ಡಾ.ನಿಂಗರಾಜು ಚಿತ್ರದಲ್ಲಿದ್ದಾರೆ.

ಅಂತರ ಕಾಲೇಜು ಇಲ್ಯುಮಿಲೇಷನ್

illumination
ಮೈಸೂರಿನ ಜೆ.ಪಿ.ನಗರದಲ್ಲಿರುವ ಹಿಂದೂಸ್ಥಾನ್ ಪ್ರಥಮ ದರ್ಜೆ ಕಾಲೇಜಿನಲ್ಲಿ ಶಿಕ್ಷಕರ ದಿನಾಚರಣೆ ಅಂಗವಾಗಿ ವಿದ್ಯಾರ್ಥಿಗಳಿಗಾಗಿ 'ಅಂತರ ಕಾಲೇಜು ಇಲ್ಯುಮಿಲೇಷನ್ -೨೦೧೭' ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಸಿ.ಕೆ.ಮಹೇಂದ್ರ, ಪ್ರಾಂಶುಪಾಲರಾದ ಡಾ.ಕೆ.ಸಾಯಿಲತಾ, ಉಪ ಪ್ರಾಂಶುಪಾಲರಾದ ಸಿ.ಚೇತನ್, ವಿಶೇಷ ಅಧಿಕಾರಿ ಏಬೆಲ್ ಮ್ಯಾಥ್ಯೂ ಪ್ರಸಾದ್ ಹಾಜರಿದ್ದರು.

ಬಳ್ಳಾರಿ ಟಸ್ಕರ್ಸ್ ಬಗ್ಗುಬಡಿದ ಬೆಳಗಾವಿ ಪ್ಯಾಂಥರ್ಸ್

ಮೈಸೂರು,ಸೆ.೧೨– ನಗರದ ಮಾನಸಗಂಗೋತ್ರಿಯ ಎಸ್‌ಡಿಎನ್‌ಆರ್ ಒಡೆಯರ್ ಮೈದಾನದಲ್ಲಿ ನಡೆದ ಕೆಪಿಎಲ್ ಪಂದ್ಯದಲ್ಲಿ ಬೆಳಗಾವಿ ಪ್ಯಾಂಥರ್ಸ್ ತಂಡ ಬಳ್ಳಾರಿ ಟಸ್ಕರ್ಸ್ ವಿರುದ್ಧ ೨೫ ರನ್‌ಗಳ ಗೆಲುವು ಸಾಧಿಸಿತು.

ಮೊದಲು ಬ್ಯಾಟ್ ಮಾಡಿದ ಬೆಳಗಾವಿ ಪ್ಯಾಂಥರ್ಸ್ ೧೯.೪ ಓವರ್‌ನಲ್ಲಿ ೧೫೪ ರನ್‌ಗಳಿಗೆ ತನ್ನ ಎಲ್ಲ ವಿಕೆಟ್‌ಗಳನ್ನು ಕಳೆದುಕೊಂಡಿತು. ಬಳಿಕ ೧೫೫ ರನ್‌ಗಳ ಗುರಿಯನ್ನು ಬೆನ್ನಟ್ಟಿದ ಬಳ್ಳಾರಿ ಟಸ್ಕರ್ಸ್ ತಂಡ ೨೦ ಓವರ್ ಆಟವಾಡಿ ೧೨೯ ರನ್‌ಗಳಿಗೆ ಸರ್ವಪತನ ಕಂಡಿತು.

ಬಳ್ಳಾರಿ ಪರ ಏಕಾಂಗಿ ಹೋರಾಟ ನಡೆಸಿದ ಕೆ.ಬಿ.ಪವನ್ ಅಜೇಯ ೬೪(೫೮) ಅರ್ಧಶತಕ ಬಾರಿಸಿದರಾದರೂ ತಂಡಕ್ಕೆ ಗೆಲುವು ತಂದುಕೊಡಲು ಸಾಧ್ಯವಾಗಲಿಲ್ಲ. ಈ ವೇಳೆ ಬೆಳಗಾವಿ ಪರ ಮಾರಕ ಬೌಲಿಂಗ್ ದಾಳಿ ಮಾಡಿದ ಕೆ.ಗೌತಮ್ ೨೫ಕ್ಕೆ ೪ ವಿಕೆಟ್ ಪಡೆದು ಮಿಂಚಿದರು.

ಬೆಳಗಾವಿ ಪ್ಯಾಂಥರ್ಸ್ ಪರ ಕಣಕ್ಕಿಳಿದ ಸ್ಟಾಲಿನ್ ಹೂವರ್ ಭರ್ಜರಿ ಆಟವಾಡಿದರು. ಬೌಂಡರಿ, ಸಿಕ್ಸರ್‌ಗಳನ್ನು ಬಾರಿಸಿ ೩೨ನೇ ಎಸೆತದಲ್ಲಿ ಆಕರ್ಷಕ ಅರ್ಧ ಶತಕ ಸಿಡಿಸಿದರು. ವೈಯಕ್ತಿಕ ೬೧(೪೫) ರನ್ ಗಳಿಸಿದ್ದ ಸಂದರ್ಭ ಭರ್ಜರಿ ಹೊಡೆತಕ್ಕೆ ಯತ್ನಿಸಿ ತಮ್ಮ ವಿಕೆಟ್ ಒಪ್ಪಿಸಿದರು.

ಕುನಾಲ್ ಕಪೂರ್ ಎಸೆದ ೧೨ನೇ ಓವರ್‌ನಲ್ಲಿ ಒಟ್ಟು ೧೬ ರನ್‌ಗಳಿಸುವ ಮೂಲಕ ತಂಡದ ಮೊತ್ತವನ್ನು ಶತಕದ ಗಡಿ ದಾಟಿಸಿದರು. ಆದರೆ, ಹೆಚ್ಚು ರನ್ ಗಳಿಸುವ ತವಕದಲ್ಲಿದ್ದ ಮನೀಷ್ ಪಾಂಡೆ(೨೪) ಹಾಗೂ ಸ್ಟಾಲಿನ್ ಹೂವರ್(೬೨) ಅವರನ್ನು ಎಡಗೈ ಸ್ಪಿನ್ನರ್ ಐ.ಜಿ.ಅನಿಲ್ ಪೆವಿಲಿಯನ್‌ಗೆ ಅಟ್ಟಿದರು.

ಇವರಿಬ್ಬರ ನಿರ್ಗಮನದ ಬಳಿಕ ಕಣಕ್ಕಿಳಿದ ಸ್ಟುವರ್ಟ್ ಬಿನ್ನಿ(೯) ಸೇರಿದಂತೆ ಇತರ ಬ್ಯಾಟ್ಸ್‌ಮನ್‌ಗಳು ತಂಡಕ್ಕೆ ನೆರವಾಗಲಿಲ್ಲ. ಒಬ್ಬರ ಹಿಂದೆ ಒಬ್ಬರಂತೆ ವಿಕೆಟ್ ಒಪ್ಪಿಸಿದರು. ಆ ಮೂಲಕ ಪ್ಯಾಂಥರ್ಸ್ ೧೯.೪ ಓವರ್‌ನಲ್ಲಿ ೧೫೪ಕ್ಕೆ ಆಲೌಟ್ ಆಯಿತು.

ಮುಂದಿನ ಪಂದ್ಯ

ಮೈಸೂರು ವಾರಿಯರ್ಸ್ ಮತ್ತು ಹುಬ್ಬಳ್ಳಿ ಟೈಗರ್ಸ್
ದಿನಾಂಕ: ಸೆ.೧೪ ಸಂಜೆ ೭ಕ್ಕೆ
ಸ್ಥಳ: ಕೆಎಸ್‌ಸಿಎ ಕ್ರಿಕೆಟ್ ಮೈದಾನ, ಹುಬ್ಬಳ್ಳಿ.